**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 121/2021**

ಚಾ.ಸಾ. 53

ಪ್ರಾ.ಸಾ. 31

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 07.07.2026**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಸ್.ಬಿ.ನವೀನ್ ಗೌಡ |
| ತಂದೆಯ ಹೆಸರು | : | ಬೆಟ್ಟರಾಮು |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಸಿ.ಪಿ.ಐ . ಅಮೃತೂರು , ಕುಣಿಗಲ್ ತಾಲ್ಲೂಕು |
| ವಾಸ | : | ಕುಣಿಗಲ್ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ದಿನಾಂಕ 01.03.2021 ರಿಂದ 14.06.2021 ರವರೆಗೆ ಪಿ.ಎಸ್.ಐ ಆಗಿ ಮದ್ದೂರು ಪೊಲೀಸ್ ಠಾಣೆ ಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 10.05.2021 ರಂದು ರಾತ್ರಿ 9.30 ಗಂಟೆಗೆ ಈ ಪ್ರಕರಣದ ದೂರುದಾರರಾದ ಶ್ರೀಕಂಠ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು ಅದನ್ನು ಪಡೆದುಕೊಂಡು ನಮ್ಮ ಠಾಣಾ ಅಪರಾಧ ಸಂಖ್ಯೆ 140/2021 ರಲ್ಲಿ ಪ್ರಕರಣ ದಾಖಲಿಸಿಕೊಂಡು ಮೂಲ ಪಿರ್ಯಾದಿ ಮತ್ತು ಪ್ರ.ವ.ವರದಿಯನ್ನು ಮಾನ್ಯ

ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಹಿಂಬರಹ ಮತ್ತು ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.107 ಎಂದು, ಸಾಕ್ಷಿಯ ಸಹಿಯನ್ನು ನಿಪಿ.107(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಗಾಗಿ ಚಾಸಾ.54 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

3. ಚಾಸಾ.54 ರವರಿಗೆ ಪ್ರಕರಣದ ತನಿಖೆಯನ್ನು ವಹಿಸಿಕೊಟ್ಟಾಗ ರಾತ್ರಿ 10.00 ಗಂಟೆ ಆಗಿತ್ತು. ಕೃತ್ಯ ನಡೆದ ಸ್ಥಳದಿಂದ ನಮ್ಮ ಪೊಲೀಸ್ ಠಾಣೆ ಸುಮಾರು 2 ಕಿ.ಮಿ ದೂರ ಇರುತ್ತದೆ. ನಮ್ಮ ಪೊಲೀಸ್ ಠಾಣೆಯಿಂದ ಮದ್ದೂರು ಸಾರ್ವಜನಿಕ ಆಸ್ಪತ್ರೆ ಸುಮಾರು 800 ಮೀಟರ್ ನಿಂದ 1 ಕಿ.ಮಿ ಅಂತರದಲ್ಲಿ ಇರುತ್ತದೆ. ಮೈಸೂರು ರಸ್ತೆಯಿಂದ ಮದ್ದೂರಿಗೆ ಪ್ರವೇಶ ಮಾಡಬೇಕಾದರೆ ಮೊದಲು ನಮ್ಮ ಪೊಲೀಸ್ ಠಾಣೆ ಇದ್ದು ನಂತರ ಆಸ್ಪತ್ರೆ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಪೊಲೀಸ್ ಠಾಣೆಗೆ ಹೋಗುವ ದಾರಿಯೇ ಬೇರೆ ಮತ್ತು ಆಸ್ಪತ್ರೆಗೆ ಹೋಗುವ ದಾರಿಯೇ ಬೇರೆ ಎಂದು ಹೇಳುತ್ತಾರೆ.

4. ಟಿ.ಬಿ.ಸರ್ಕಲ್ ನಿಂದ ನಮ್ಮ ಠಾಣೆ 500 ಮೀಟರ್ ದೂರದಲ್ಲಿ ಇರುತ್ತದೆ. ಅದೇ ಟಿ.ಬಿ.ಸರ್ಕಲ್ ನಿಂದ ಸಾರ್ವಜನಿಕ ಆಸ್ಪತ್ರೆ ಸುಮಾರು 600 ಮೀಟರ್ ದೂರದಲ್ಲಿ ಇರುತ್ತದೆ. ನಾನು ಠಾಣೆಯಲ್ಲಿ ಇದ್ದಾಗ ಸರ್ಕಾರಿ ಆಸ್ಪತ್ರೆಯಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಸುನೀಲ್ ಕುಮಾರ್ ಎಂಬಾತ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ ಎಂದು ನೆನಪಿರುವುದಿಲ್ಲ. ದೂರು ಕೊಟ್ಟವರಿಂದ ಸುನೀಲ್ ಕುಮಾರ್ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಮಾಹಿತಿ ಪಡೆದುಕೊಂಡಿರುವುದಿಲ್ಲ.

5. ನಾನು ಪ್ರಕರಣದ ತನಿಖೆಯನ್ನು ಚಾಸಾ.54 ರವರಿಗೆ ವಹಿಸಿಕೊಡುವುದಕ್ಕಿಂತ ಮೊದಲು ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದೆ . ಬಾಕ್ಸಿದಾರರಿಂದ ಸುಮಾರು 8-8.30 ಗೆ

ಕೃತ್ಯ ನಡೆದ ಬಗ್ಗೆ ಮಾಹಿತಿ ಬಂದಿರುತ್ತದೆ. ಸ್ಥಳಕ್ಕೆ ಹೋದಾಗ ಅಲ್ಲಿ ಜನರು ಇದ್ದರು. ಆ ಸಮಯದಲ್ಲಿ ಯಾರು ದೂರು ಕೊಟ್ಟಿರುವುದಿಲ್ಲ. ಆದರೆ ಮೃತನ ತಂದೆಯವರು ನಮ್ಮ ಜೊತೆ ಠಾಣೆಗೆ ಬಂದು ದೂರು ಕೊಟ್ಟಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ..

**(**ಮಧ್ವೇಶ ಡಬೇರ**)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.